**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 481/2025**

| | | |
|---|---|---|
| ಹೆಸರು | ಶ್ರೀ ಶಿವನಾಯಕ | ಚಾಸಾಃ 11 |
| ತಂದೆ ಹೆಸರು | ಶ್ರೀ ಚೆನ್ನನಾಯಕ | ಫ್ರಾಸಾಃ 07 |
| ವಯಸ್ಸು | 55 ವರ್ಷ | ಸಾಕ್ಷಿಯನ್ನು ದಿನಾಂಕಃ 30.12.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಕೂಲಿ | |
| ವಾಸ | ಕೋಟೆಕೆರೆ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಸಾಕ್ಷಿಯು ನಿಪಿ2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಕೋಟೆಕೆರೆ ಗ್ರಾಮದ ಸಹಕಾರ ಬ್ಯಾಂಕ್ ಹತ್ತಿರ ಸುಮಾರು 4 ತಿಂಗಳ ಹಿಂದೆ ಮಾಡಿರುತ್ತೇನೆ. ಪೊಲೀಸರು ಮಹಜರ್ ಮಾಡಲು ಬಂದಿದ್ದರು, ಆಗ ಸದರಿ ಸಹಿಯನ್ನು ಮಾಡಿರುತ್ತೇನೆ. ಚಾಸಾ–1 ರವರು ಘಟನಾ ಸ್ಥಳವನ್ನು ತೋರಿಸಿದರು. ಆ ಕಾಲಕ್ಕೆ ಸದರಿ ಬ್ಯಾಂಕಿನ ಬೀಗವನ್ನು ಅಮಾನತ್ತುಪಡಿಸಿಕೊಂಡರು. ಸಂಜೆ 4.00 ಗಂಟೆಗೆ ಮಹಜರ್ ಮಾಡಿರುತ್ತಾರೆ. ಆ ಕಾಲಕ್ಕೆ ಚಾಸಾ–10 ರವರು ಹಾಜರಿದ್ದರು. ಆ ಕಾಲಕ್ಕೆ ನಿಪಿ3 ರಂತೆ ಫೋಟೋ ತೆಗೆದರು. ಮು.ಮಾ.1 ನ್ನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 28.03.2025 ರಂದು ಕೋಟೆಕೆರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಬ್ಯಾಂಕ್ ಹತ್ತಿರ ನಿಪಿ2 ಕ್ಕೆ ನನ್ನ ಸಹಿ ಪಡೆದರು. ಸದರಿ ಮಹಜರ್ ನ್ನು ಅಂದು ಸಂಜೆ 6.30 ರಿಂದ 7.15 ರವರೆಗೆ ಮಾಡಲಾಯಿತು ಎಂದರೆ ಸರಿ. ನಿಪಿ2 ರ ವಿಷಯ ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಘಟನೆಯ ದಿನಾಂಕ ನನಗೆ ಗೊತ್ತಿಲ್ಲ. ಸಂಜೆ 4.00 ಗಂಟೆ ಸಮಯಕ್ಕೆ ಬೆಳಕು ಚೆನ್ನಾಗಿರುತ್ತದೆ ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಬಂದಾಗ ನಾನು ಬ್ಯಾಂಕಿನ ಹತ್ತಿರ ಬರುತ್ತಿದ್ದೆ. ಮಾರ್ಚ್ ತಿಂಗಳಿನಲ್ಲಿ ಸಂಜೆ 6.30 ಕ್ಕೆ ಕತ್ತಲೆಯಾಗಿರುತ್ತದೆ ಎಂದರೆ ಸರಿ. ಕತ್ತಲಾದಾಗ ಒಬ್ಬರನ್ನು ಒಬ್ಬರು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ಬೀಗವನ್ನು ಹಾಕಿದ್ದರು. ಮು.ಮಾ.1 ರ ತೂಕ ಅರ್ಧ ಕೆ.ಜಿ ಇರಬಹುದು. ಅದು ಕಬ್ಬಿಣದ ಬೀಗ. ಪೊಲೀಸರು ನನಗೆ ಪಂಚರಾಗುಂವೆ ನನಗೆ ನೋಟೀಸ್ ನೀಡಿಲ್ಲ. ನಂತರ ನಾನು ಠಾಣೆಯಲ್ಲಿ ಹೇಳಿಕೆ ನೀಡಿಲ್ಲ. ನಿಪಿ2 ರಲ್ಲಿ ಬರೆದಿರು ವಿಷಯ ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿರುತ್ತೇನೆ. ಸದರಿ ಸೊಸೈಟಿಯ ಸ್ವತ್ತು ಆರೋಪಿಗಳಿಗೆ ಸೇರಿದ್ದು, ಅದನ್ನು ಕಬಳಿಸುವ ಸಲುವಾಗಿ ಚಾಸಾ−1 ರವರ ಕೋರಿಗೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸೊಸೈಟಿಯಲ್ಲಿ ನಾನು ಷೇರುದಾರ ಎಂದರೆ ಸರಿಯಲ್ಲ. ಚಾಸಾ−1 ರವರ ಜೊತೆ ಶಾಮಿಲಾಗಿ ಸೊಸೈಟಿಗೆ ಆರೋಪಿಗಳ ಜಾಗವನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಬೀಗ ಹೊಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಸೊಸೈಟಿಯ ಜಾಗ ಆರೋಪಿಗಳಿಗೆ ಸೇರಿದ್ದು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**